

ಸಂಪಾದಕೀಯ

# ಶ್ರೀರಾಮಕೃಷ್ಣರ ವೇದಾಂತ

ಐತಿಹಾಸಿಕವಾಗಿ ನೋಡಿದರೆ ಭಾರತದಲ್ಲಿ ಅತಿ ಪ್ರಾಚೀನ ಕಾಲದಿಂದ ಇಂದಿನವರೆಗೂ ಮುಂದುವರಿದುಕೊಂಡು ಬಂದಿರುವ ಪ್ರಾಯೋಗಿಕ ಧರ್ಮವೇ ವೇದಾಂತ. ಇದು ತತ್ತ್ವವೂ ಹೌದು. ಭಾರತೀಯ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಆಧ್ಯಾತ್ಮಿಕತೆಯು ವೇದಾಂತ ದರ್ಶನದ ಸೂಕ್ಷ್ಮ ತತ್ತ್ವಗಳನ್ನೇ ಅವಲಂಬಿಸಿದೆ ಎನ್ನಬೇಕು. ಆಧುನಿಕ ಯುಗದಲ್ಲಿ ಅವತರಿಸಿ ಬಂದ ಯುಗಪ್ರವರ್ತಕ ಶ್ರೀರಾಮಕೃಷ್ಣ ಪರಮಹಂಸರು ಈ ವೇದಾಂತ ಪರಂಪರೆಯಲ್ಲಿ ಬೆಳಗಿ ನಿಂತ ಉಜ್ವಲ ಮೂರ್ತಿಯಾಗಿ ಕಂಡುಬರುತ್ತಾರೆ. ಸುದೀರ್ಘ ಇತಿಹಾಸದ ಏರಿಳಿತಗಳ ನಡುವೆ ನಮ್ಮ ದೇಶದಲ್ಲಿ ಧಾರ್ಮಿಕ, ಆಧ್ಯಾತ್ಮಿಕ ನಂಬಿಕೆಗಳು ಹಲವು ಬಾರಿ ಮಂಕಾದದ್ದಿದೆ; ಆಗ ಧರ್ಮಸಂಸ್ಥಾಪನೆಗಾಗಿ ಯುಗಯುಗದಲ್ಲಿ ಅವತರಿಸಿ ಬಂದ ದೇವಮಾನವರು ಸನಾತನ ಧರ್ಮದ ಮಾರ್ಗವನ್ನು ಜನರಿಗೆ ಮತ್ತೆ ಮತ್ತೆ ತೋರಿಸಿಕೊಟ್ಟಿದ್ದಾರೆ. ಇಂಥ ದೇವಮಾನವರ ಸಾಲಿನಲ್ಲಿ ನಿಂತ ಕೊನೆಯ ಕೊಂಡಿಯೇ ಶ್ರೀರಾಮಕೃಷ್ಣರು. 'ವೇದಾಂತ ತತ್ತ್ವ'ವನ್ನು 'ವೇದಾಂತ ಧರ್ಮ'ವಾಗಿ ವ್ಯಾಪಕಗೊಳಿಸುವಲ್ಲಿ ಅವರಂಥ ಮಹಾಪುರುಷರ ಕೊಡುಗೆ ದೊಡ್ಡದು. ನಮ್ಮ ಜೀವನದ ಸಾಂಸ್ಕೃತಿಕ-ಆಧ್ಯಾತ್ಮಿಕ ಸ್ರೋತವನ್ನು ಕಂಡುಕೊಂಡು, ಅದರಲ್ಲಿ ಮಿಂದೇಳುವ ಅಗತ್ಯ ಈ ಕಾಲದಲ್ಲಿ ಹಿಂದೆಂದಿಗಿಂತಲೂ ಅಧಿಕವಾಗಿದೆ. ಈ ದೃಷ್ಟಿಯಿಂದ ನೋಡುವಾಗ, 'ಶ್ರೀರಾಮಕೃಷ್ಣರ ವೇದಾಂತ' ಎಂಬ ಚಿಂತನೆ ಅತ್ಯಂತ ಪ್ರಸ್ತುತವೆನಿಸುತ್ತದೆ.

## ವೇದಾಂತ ಎಂದರೇನು?

ಹೆಸರೇ ಸೂಚಿಸುವಂತೆ, ವೇದಗಳ ಅಂತಿಮ ಭಾಗವಾದ ಉಪನಿಷತ್ತುಗಳನ್ನೇ ವೇದಾಂತ ಎನ್ನಬಹುದು; ಆದರೆ 'ವೇದಾಂತ'ವೆಂದರೆ ಉಪನಿಷತ್ತುಗಳಷ್ಟೇ ಅಲ್ಲ – ಅವು 'ವೇದಾಂತ'ದ ಒಂದು ಪ್ರಮುಖ ಅಂಗವಾಗಿದ್ದರೂ ಕೂಡ. ಹಿಂದೂ ಶಾಸ್ತ್ರ ಗ್ರಂಥಗಳಲ್ಲೆಲ್ಲ ಅತ್ಯಂತ ಶ್ರೇಷ್ಠವೂ, ಅತ್ಯುನ್ನತ ಪ್ರಮಾಣ ಗ್ರಂಥವೂ, ಅಧಿಕಾರಯುಕ್ತವೂ ಆದ ರಚನೆಯೇ ವೇದಗಳು; ಅವುಗಳ ಅಂತಿಮ ಭಾಗವಾದ ಉಪನಿಷತ್ತುಗಳು ತಮ್ಮಲ್ಲಿನ ಅತ್ಯುನ್ನತ ಚಿಂತನೆಗಳ ಹಾಗೂ ಆಧ್ಯಾತ್ಮಿಕ ಭಾವನೆಗಳ ದೃಷ್ಟಿಯಿಂದ ಮಹತ್ತರವಾಗಿದ್ದು ನಮ್ಮೆಲ್ಲ ಪರಂಪರೆಗಳನ್ನೂ ರೂಪಿಸಿವೆ. ಉಪನಿಷತ್ತುಗಳೊಂದಿಗೆ 'ಬ್ರಹ್ಮಸೂತ್ರ'ಗಳು ಹಾಗೂ ಭಗವದ್ಗೀತೆ — ಇವು 'ಪ್ರಸ್ಥಾನತ್ರಯ'ಗಳೆನಿಸಿವೆ. ವೇದಾಂತ ತತ್ತ್ವಗಳನ್ನು ನಿರೂಪಿಸುವಲ್ಲಿ ಈ ಮೂರು ಶಾಸ್ತ್ರಗಳ ಮಹತ್ವ ಪ್ರಧಾನವಾಗಿವೆ. ಇದರೊಂದಿಗೆ ವೇದಾಂತ ತತ್ತ್ವಗಳನ್ನು ವಿವರಿಸಲು ಶ್ರೀಶಂಕರರೇ ಮೊದಲಾದ ಆಚಾರ್ಯರು ರಚಿಸಿದ ಭಾಷ್ಯಗಳು, ಪ್ರಕರಣ ಗ್ರಂಥಗಳು ಪ್ರಮುಖವಾಗಿವೆ. 'ವೇದಾಂತ'ವೆಂಬ ಭಾವನೆ ಕೇವಲ ಗ್ರಂಥಗಳಿಗೆ ಮಾತ್ರ ಸೀಮಿತವಲ್ಲ – ಕಾರಣ, ಅದು ಜೀವಂತ ಧರ್ಮ. ಅನಾದಿ ಕಾಲದಿಂದ ನಮ್ಮ ದೇಶದುದ್ದಕ್ಕೂ ಆಗಿ ಹೋದ ಸಾಧು-ಸಂತರ, ಅವತಾರಗಳ, ಆಚಾರ್ಯರ ಆಧ್ಯಾತ್ಮಿಕ ಅನುಭವಗಳೂ, ಅವರ ದಿವ್ಯ ನುಡಿಗಳೂ, ಭಜನೆ-ಸ್ತೋತ್ರ ಮುಂತಾದ ರಚನೆಗಳೂ 'ವೇದಾಂತ'ವೆಂಬ ಪರಂಪರೆಯ ಪ್ರಧಾನ ಅಂಗಗಳಾಗಿವೆ. ಈ ವೇದಾಂತವೆಂಬ ಪ್ರವಾಹವು ವೇದಗಳೆಂಬ ಗಂಗೋತ್ರಿಯಲ್ಲಿ ಹುಟ್ಟಿ, ಮುಂದೆ ವಿವಿಧ ಕಾಲಘಟ್ಟಗಳಲ್ಲಿ ವ್ಯಾಪಕಗೊಂಡು, ದೇವಮಾನವರ ಹಾಗೂ ಇತರ ಮಹಾಪುರುಷರ ಆಧ್ಯಾತ್ಮಿಕ ಅನುಭವಗಳಲ್ಲಿ ಪರಮಾರ್ಥವೆಂಬ ಸಾಗರವನ್ನು ಸೇರುತ್ತದೆ.

## ವೇದಾಂತ ನಿರೂಪಣೆ

ವೇದಾಂತದ ಮೂಲಗ್ರಂಥಗಳೆಲ್ಲ ಸಂಸ್ಕೃತದಲ್ಲಿವೆ; ಅದರಲ್ಲೂ ಉಪನಿಷತ್ತುಗಳ ಭಾಷೆ ಅತಿ ಪ್ರಾಚೀನ. ಅವುಗಳನ್ನು ಅರ್ಥೈಸಿಕೊಳ್ಳಲು ಭಾಷ್ಯ, ವ್ಯಾಖ್ಯಾನ, ಟೀಕೆ-ಟಿಪ್ಪಣಿಗಳ ಅಗತ್ಯವಿದೆ. ಇದಕ್ಕೆ ಹೋಲಿಸಿದರೆ, ಭಗವದ್ಗೀತೆ ಅತ್ಯಂತ ಸರಳವಾಗಿದೆ. ಇತರ ವೇದಾಂತ ಗ್ರಂಥಗಳೂ ಸಂಸ್ಕೃತದಲ್ಲಿವೆ, ಆದರೆ ಅವೆಲ್ಲ ಗಹನ ತತ್ತ್ವಗಳನ್ನು ಸರಳ ಭಾಷೆಯಲ್ಲಿ ವಿವರಿಸುತ್ತವೆ. ತಾರ್ಕಿಕ ಅಂಶಗಳನ್ನು ವಿಶ್ಲೇಷಿಸುವ ಕಠಿಣ ಶೈಲಿಯ ಗ್ರಂಥಗಳೂ ಇವೆ; ಆದರೆ ಗಹನ ತತ್ತ್ವಗಳ ಸರಳ ನಿರೂಪಣೆಯಂತಿರುವ ರಚನೆಗಳು ಹಾಗೂ ದೇಶೀಯ ಭಾಷೆಗಳ ಅನುವಾದಗಳು 'ವೇದಾಂತ' ವನ್ನು ಜನರೆಡೆಗೆ ಕರೆದೊಯ್ದಿವೆ. ಇದಕ್ಕಿಂತ ಹೆಚ್ಚು ವ್ಯಾಪಕವೂ ಜನಪ್ರಿಯವಾಗಿ ಆದುದು ಸಾಧು-ಸಂತರ ವಾಣಿ. ಮಹಾಪುರುಷರೆಲ್ಲ ಜನರ ನಡುವೆ ಬದುಕಿದವರು, ಜನರಿಗಾಗಿ

ಅವರ ನುಡಿಗಳಲ್ಲೇ ನುಡಿದವರು. ಈ ದೃಷ್ಟಿಯಿಂದ ಶ್ರೀಕೃಷ್ಣ, ಬುದ್ಧ, ಶ್ರೀರಾಮಕೃಷ್ಣರಂಥವರು ಗಹನ ತತ್ತ್ವಗಳನ್ನು ಆಡು ಮಾತಿನ ಮೂಲಕವೇ ಜನಸಾಮಾನ್ಯರಿಗೆ ತಲುಪಿಸಿದರು. ವೇದಾಂತವು ಹೇಳುವ ಸತ್ಯಗಳಿಗೆ ಪ್ರಮಾಣವೇನು ಎಂಬ ಪ್ರಶ್ನೆ ಬಂದಾಗ, ಅನುಭವ ಪ್ರಾಮಾಣ್ಯವೇ ಎಲ್ಲಕ್ಕಿಂತ ಮುಖ್ಯವಾಗುತ್ತದೆ. ಶ್ರೀರಾಮಕೃಷ್ಣರ ಅನುಭವ ಹಾಗೂ ವಾಣಿಯಲ್ಲಿ ನಾವು ಇದನ್ನರಸಬೇಕಾಗುತ್ತದೆ.

### ಪರಮಸತ್ಯ : ಆತ್ಮ ಅಥವಾ ಬ್ರಹ್ಮ

ಉಪನಿಷತ್ತುಗಳು ಹೇಳುವಂತೆ, ಆತ್ಮವೆಂಬುದೇ ಎಲ್ಲವನ್ನೂ ಆಧರಿಸಿ ನಿಂತಿರುವ ಸತ್ಯವಾಗಿದೆ. ಇದನ್ನು ಪುರುಷ, ಬ್ರಹ್ಮ ಎಂದು ಹಲವೆಡೆ ಬೇರೆ ಹೆಸರುಗಳಿಂದಲೂ ನಿರ್ದೇಶಿಸಲಾಗಿದೆ. ಈ ಆತ್ಮವನ್ನು ಅರಿತರೆ ಮಾನವನು ಮುಕ್ತನಾಗುತ್ತಾನೆ; ಅಮೃತತ್ವವನ್ನು ಹೊಂದುತ್ತಾನೆ. ಎಲ್ಲ ದುಃಖ, ಗೊಂದಲ, ಅಜ್ಞಾನಗಳನ್ನು ಕಳೆದುಕೊಂಡು ಶಾಶ್ವತ ಆನಂದವನ್ನು ಪಡೆಯುತ್ತಾನೆ.

ಶ್ರೀರಾಮಕೃಷ್ಣರು ಬ್ರಹ್ಮವನ್ನರಿತು ವಿವರಿಸುವ ಬಗೆ ಹೀಗೆ: ''ಬ್ರಹ್ಮ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗುವುದಿಲ್ಲ. ಎಲ್ಲವೂ ಉಚ್ಛಿಷ್ಟವಾಗಿ ಹೋಗಿವೆ – ವೇದ, ಪುರಾಣ, ತಂತ್ರ , ಷಡ್ದರ್ಶನ, ಎಲ್ಲಾ ಇವೆಲ್ಲ ಬಾಯಿಂದ ಹೊರ ಹೊಮ್ಮುವುದರಿಂದ, ನಾಲಗೆ ಉಚ್ಚರಿಸುವುದರಿಂದ ಉಚ್ಛಿಷ್ಟವಾಗಿದೆ. ಆದರೆ ಕೇವಲ ಒಂದು ವಸ್ತು ಮಾತ್ರ ಉಚ್ಛಿಷ್ಟವಾಗಿಲ್ಲ. ಅದೇ ಬ್ರಹ್ಮ. ಬ್ರಹ್ಮ ಎಂದರೆ ಏನು ಎಂಬುದನ್ನು ಯಾರೂ ಇದುವರೆಗೆ ವರ್ಣನೆ ಮಾಡಲಾಗಿಲ್ಲ.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೪೫)*

ಬ್ರಹ್ಮವನ್ನು ವರ್ಣಿಸಲಾಗದು, ವಿವರಿಸಲಾಗದು ಎಂದು ಉಪನಿಷತ್ತುಗಳು ಹೇಳುತ್ತವೆ. **'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'** (ಎಲ್ಲಿ ಮಾತುಗಳು ಹಿಂದಿರುಗುವವೋ, ಮನಸ್ಸು ಸಮೀಪಿಸಲಾಗದೋ– ಅದೇ ಬ್ರಹ್ಮ) ಎಂದು ತೈತ್ತಿರೀಯ ಉಪನಿಷತ್ತು , **'ಅವ್ಯಪದೇಶ್ಯಂ'**('ನಿರ್ದೇಶಿಸಲು ಅಸಾಧ್ಯವಾದುದು') ಎಂದು ಮಾಂಡೂಕ್ಯೋಪನಿಷತ್ತು , ಹಾಗೂ **'ಯನ್ಮನಸಾ ನ ಮನುತೇ'** ('ಯಾವುದನ್ನು ಮನಸ್ಸಿನಿಂದ ಮನನ ಮಾಡಲಾಗದೋ') ಮೊದಲಾದ ಉಕ್ತಿಗಳಿಂದ ಕೇನೋಪನಿಷತ್ತು ಬ್ರಹ್ಮದ ಅನಿರ್ವಚನೀಯತೆಯನ್ನು ತಿಳಿಸಿಕೊಡುತ್ತದೆ. ಶ್ರೀರಾಮಕೃಷ್ಣರು ಹಲವು ದೃಷ್ಟಾಂತಗಳ, ಉಪಮೆಗಳ ಮೂಲಕ ಈ ಅಂಶವನ್ನು ಸರಳವಾಗಿ ವಿವರಿಸುತ್ತಾರೆ:

''ಸಮಾಧಿಯಲ್ಲಿ ಬ್ರಹ್ಮಜ್ಞಾನ ದೊರೆಯುತ್ತದೆ – ಬ್ರಹ್ಮದರ್ಶನ ದೊರೆಯುತ್ತದೆ. ಆ ಅವಸ್ಥೆಯಲ್ಲಿ ವಿಚಾರ ಪೂರ್ತಿಯಾಗಿ ನಿಂತುಹೋಗುತ್ತದೆ, ಮನುಷ್ಯ ಮೂಕನಾಗಿಬಿಡುತ್ತಾನೆ. ಬ್ರಹ್ಮನ ಸ್ವರೂಪವೇನು ಎಂಬುದನ್ನು ವರ್ಣಿಸಲು ಶಕ್ತಿ ಇರುವುದಿಲ್ಲ.

''ಉಪ್ಪಿನ ಬೊಂಬೆ ಒಮ್ಮೆ ಸಮುದ್ರದ ಆಳ ಕಂಡುಹಿಡಿಯಲು ಹೋಯಿತು. ಅದರ ಆಳ ಎಷ್ಟಿದೆ ಎಂಬುದನ್ನು ಪರರಿಗೆ ತಿಳಿಸಬೇಕು ಅಂತ ಅದು ಮನಸ್ಸು ಮಾಡಿಕೊಂಡಿತ್ತು. ಆದರೆ ಅದಕ್ಕೆ ಹಾಗೆ ಮಾಡಲು ಸಾಧ್ಯವೇ ಆಗಲಿಲ್ಲ. ಇಳಿಯುವುದೇ ತಡ ಕರಗಿ ಹೋಯಿತು. ಸಮುದ್ರದ ಆಳ ಎಷ್ಟು ಎಂಬುದನ್ನು ತಿಳಿಸುವುದಕ್ಕೆ ಉಳಿದುಕೊಂಡಿರುವವರು ಯಾರು?''

*(ಅಲ್ಲೇ ಪು. ೪೬,೪೭)*

''ಬ್ರಹ್ಮ ಅವಾಙ್ಮನಸಗೋಚರ ಎಂಬುದಾಗಿ ವೇದಗಳಲ್ಲಿ ಹೇಳಿದೆ. ಜ್ಞಾನಸೂರ್ಯನ ತಾಪದಿಂದ ಹಿಮಗಡ್ಡೆಯಂತಹ ಭಗವಂತನ ಸಾಕಾರ ರೂಪ ಕರಗಿಹೋಗುತ್ತದೆ. ಬ್ರಹ್ಮಜ್ಞಾನ ದೊರೆತನಂತರ ಅಂದರೆ, ನಿರ್ವಿಕಲ್ಪಸಮಾಧಿ ದೊರೆತನಂತರ, ಅದರಲ್ಲಿ ಅದೇ ಅನಂತ ವಾಙ್ಮನಾತೀತ ಅರೂಪ ನಿರಾಕಾರ ಬ್ರಹ್ಮನ ದರ್ಶನ.

''ಪರಬ್ರಹ್ಮನ ಸ್ವರೂಪ ಏನೆಂಬುದಾಗಿ ಬಾಯಲ್ಲಿ ಹೇಳಲಾಗುವುದಿಲ್ಲ. ಅದರ ಸಂಬಂಧವಾಗಿ ಮಾತೇ ಹೊರಡುವ ಹಾಗಿಲ್ಲ. ಅನಂತವನ್ನು ಯಾರು ತಾನೇ ಮಾತಿನಿಂದ ವರ್ಣಿಸಬಲ್ಲರು? ಹಕ್ಕಿ ಎಷ್ಟೇ ಎತ್ತರಕ್ಕೆ ಹಾರಿಹೋದರೂ, ಅದು ಹಾರಿ ಹೋಗಬೇಕಾದ ಎತ್ತರ ಇನ್ನು ಉಳಿದುಕೊಂಡೇ ಇರುತ್ತದೆ.''

*(ಅಲ್ಲೇ ಪು. ೧೮೫)*

''ನಾಲ್ಕು ನಾಲ್ಕು ಜನ ಸ್ನೇಹಿತರು ಹಾಗೇ ಸುತ್ತಾಡುತ್ತ ಸುತ್ತಾಡುತ್ತ ಹೋಗುವಾಗ ಒಂದು ಕಡೆ ನಾಲ್ಕು ದಿಕ್ಕಿಗೂ ಗೋಡೆ ಎದ್ದಿದ್ದ ಒಂದು ಸ್ಥಳ ಕಣ್ಣಿಗೆ ಬಿತ್ತು. ಗೋಡೆ ಬಹಳ ಎತ್ತರದವರೆಗೆ ಎದ್ದಿತ್ತು. ಅದರೊಳಗೆ ಏನಿದೆ ಎಂಬುದನ್ನು ಅರಿಯಲು ಎಲ್ಲರೂ ಬಹಳವಾಗಿ ಕುತೂಹಲಪಟ್ಟರು. ಒಬ್ಬ ಅದರ ಮೇಲಕ್ಕೆ ಹತ್ತಿದ. ಆ ಕಡೆ ದೃಷ್ಟಿ ಬಿದ್ದೊಡನೆಯೇ ಆತನಿಗೆ ಏನು ಕಂಡುಬಂತೊ, ಅದು ಆತನನ್ನು ಆಶ್ಚರ್ಯಚಕಿತನನ್ನಾಗಿ ಮಾಡಿಬಿಟ್ಟಿತು. ಆತ ಕೇವಲ, 'ಆಹ! ಆಹ! ಆಹ! ಆಹ!' ಅಂತ ಹೇಳಿ ಒಳಕ್ಕೆ ಧುಮುಕಿಬಿಟ್ಟ. ಮತ್ತೇನು ಸಮಾಚಾರವನ್ನೂ ಕೊಡಲಿಲ್ಲ. ಉಳಿದವರೂ ಹಾಗೆಯೇ ಹತ್ತಿ, ಮೊದಲನೆಯವನ ಹಾಗೆಯೇ 'ಆಹ! ಆಹ! ಆಹ! ಆಹ!' ಅಂತ ಕೂಗಿ ಒಳಕ್ಕೆ ಧುಮುಕಿಬಿಟ್ಟರು. ಈಗ ಒಳಗೇನಿದೆ ಎಂಬುದನ್ನು ಯಾರು ತಾನೆ ಹೇಳಬಲ್ಲರು?

''ಜಡಭರತ, ದತ್ತಾತ್ರೇಯ ಮೊದಲಾದವರು ಬ್ರಹ್ಮಸಾಕ್ಷಾತ್ಕಾರ ದೊರೆತ ನಂತರ ಅದರ ಸಂಬಂಧವಾಗಿ ಯಾವ ಸುದ್ದಿಯನ್ನೂ ಕೊಡಲಾರದೆಹೋದರು. ಬ್ರಹ್ಮಜ್ಞಾನ ದೊರೆತು ಸಮಾಧಿಯುಂಟಾಯಿತು ಎಂದರೆ 'ಅಹಂ' ಎಂಬುದು ಉಳಿದಿರದು. ''

*(ಅಲ್ಲೇ ಪು. ೨೪೭)*

ಶ್ರೀರಾಮಕೃಷ್ಣರ ಜೀವನದಲ್ಲಿ ಅನೇಕ ಬಾರಿ ಅವರು ತಮ್ಮ ಸಮಾಧಿಯ ಅನುಭವವನ್ನು ವಿವರಿಸಲು ಯತ್ನಿಸಿ ಹತಾಶರಾಗಿದ್ದಾರೆ. ಒಂದು ಬಾರಿ ಅವರು ತಮ್ಮ ಸಮಾಧಿಯ ಅನುಭವ ಎಂತಹುದು ಎಂಬುದನ್ನು ವಿವರಿಸಲು ನಿರ್ಧರಿಸಿದರು. ಆದರೆ ಸಮಾಧಿಯನ್ನು ಕುರಿತು ಚಿಂತಿಸುತ್ತಲೇ ಅವರ ಮನಸ್ಸು ಉನ್ನತ

ಸ್ತರಕ್ಕೇರಿ, ಸಮಾಧಿಯ ಸ್ಥಿತಿಯನ್ನು ಅವರು ಹೊಂದಿದರು. 'ತಾಯಿ ಹೇಳಲು ಬಿಡುವುದಿಲ್ಲ, ಬಾಯಿ ಮುಚ್ಚಿಬಿಡುತ್ತಾಳೆ' ಎಂದು ಅವರು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. *(ಶ್ರೀರಾಮಕೃಷ್ಣ ಲೀಲಾ ಪ್ರಸಂಗ, ಭಾಗ ೧, ಪು.೪೦೫)*

ಯಾವ ಬ್ರಹ್ಮವಸ್ತುವು ಇಂದ್ರಿಯ, ಮನಸ್ಸು, ಬುದ್ಧಿಗಳಿಗಿಂತ ಆಚೆಗಿರುವುದೋ, ಅದನ್ನು ಈ ಯಾವ ಮಾನವ ಉಪಕರಣಗಳೂ ವ್ಯಕ್ತಪಡಿಸಲಾರವು. ಕಾರಣ, ಬ್ರಹ್ಮದ ನೆಲೆ ಅಗಾಧವಾದದ್ದು; ಇಂದ್ರಿಯಗಳು ಅತ್ಯಂತ ನಿಯಮಿತವಾದವು ಹಾಗೂ ಅಲ್ಪವಾದವು. ಅವು ಕೇವಲ ಬ್ರಹ್ಮನ ಕುರಿತಾದ ಸೂಚನೆಗಳನ್ನಷ್ಟೇ ಅರಿತುಕೊಳ್ಳಬಲ್ಲವು. ಅದರ ನೇರ ಅನುಭವ ಆ ಸೂಚನೆಗಿಂತ ಸಂಪೂರ್ಣ ಭಿನ್ನವಾದುದು. ಈ ಸತ್ಯವನ್ನು ಶ್ರೀರಾಮಕೃಷ್ಣರ ಅನುಭವ ಹಾಗೂ ಉಪನಿಷದ್ವಾಕ್ಯಗಳು ವ್ಯಕ್ತಪಡಿಸುತ್ತವೆ.

### ಜೀವ, ಜಗತ್ತು

ಪ್ರಪಂಚದ ರಚನೆಯ ವಿಷಯವಾಗಿ ವೇದಾಂತ ಹೇಳುತ್ತದೆ: ''ಬ್ರಹ್ಮವೊಂದೇ ಆದಿಯಲ್ಲಿ ಇತ್ತು. ತಾನು ಅನೇಕವಾಗ ಬೇಕೆಂದು ಅದು ಯೋಚಿಸಿತು. ಬಳಿಕ ಪ್ರಪಂಚವನ್ನು ಸೃಷ್ಟಿಸಿ, ಅದನ್ನೇ ಹೊಕ್ಕುಬಿಟ್ಟಿತು'' *(ತೈತ್ತಿರೀಯ ಉಪನಿಷತ್ತು, ೨.೬)*

ಸೃಷ್ಟಿಯ ಕ್ರಮದಲ್ಲಿ ಪ್ರಕೃತಿಯ ಅಥವಾ ಮಾಯೆಯ ಪಾತ್ರ ಮುಖ್ಯವಾದದ್ದು. ಉಪನಿಷತ್ತುಗಳಲ್ಲಿ ಈ ಅಂಶಕ್ಕೆ ಹೆಚ್ಚಿನ ಮಹತ್ವ ಕಂಡುಬರದಿದ್ದರೂ, ಗೀತೆಯಲ್ಲಿ ಹಲವೆಡೆ ಇದನ್ನು ವಿವರಿಸಿದ್ದನ್ನು ಕಾಣುತ್ತೇವೆ. **'ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ । ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್'** ('ನನ್ನ ಪ್ರಕೃತಿಯನ್ನು ಅಧಿಷ್ಠಾನವಾಗಿ ಮಾಡಿಕೊಂಡು, ಪ್ರಕೃತಿಯ ವಶದಿಂದ ಅಸ್ವತಂತ್ರವಾದ ಈ ಪ್ರಾಣಿವರ್ಗವನ್ನೆಲ್ಲಾ ಪುನಃ ಪುನಃ ಸೃಷ್ಟಿಸುತ್ತಿರುವೆನು') *(ಗೀತೆ ೯.೮)*

ಶ್ರೀರಾಮಕೃಷ್ಣರ ಉಪದೇಶಗಳಲ್ಲಿ ಜಗತ್ತನ್ನು ಸೃಷ್ಟಿಸುವ ಶಕ್ತಿಯನ್ನು ಜಗನ್ಮಾತೆ ಅಥವಾ ಕಾಳಿಯೆಂದೇ ಪರಿಭಾವಿಸಲಾಗಿದೆ. ತಂತ್ರಶಾಸ್ತ್ರದ ಹಿನ್ನೆಲೆಯಲ್ಲಿ ಈ ತತ್ತ್ವವನ್ನು ಅವರು ವಿವರಿಸುತ್ತಾರೆ:

''ಆದ್ಯಾಶಕ್ತಿ ಲೀಲಾಮಯಿ; ಸೃಷ್ಟಿ ಸ್ಥಿತಿ ಪ್ರಳಯ ಮಾಡುತ್ತಾಳೆ. ಆಕೆಗೇ ಕಾಳೀ ಅಂತ ಹೆಸರು. ಕಾಳಿಯೇ ಬ್ರಹ್ಮ, ಬ್ರಹ್ಮನೇ ಕಾಳಿ. ವಸ್ತು ಒಂದೇ. ನಿಷ್ಕ್ರಿಯವಾಗಿರುವಾಗ, ಸೃಷ್ಟಿ ಸ್ಥಿತಿ ಪ್ರಳಯ ಮಾಡದಿರುವಾಗ ಅದೇ ವಸ್ತುವಿಗೆ ಬ್ರಹ್ಮ ಅಂತ ಹೆಸರು. ಆದರೆ ಆ ಎಲ್ಲಾ ಕಾರ್ಯಗಳನ್ನೂ ಮಾಡುತ್ತಿರುವಾಗ ಅದೇ ವಸ್ತುವಿಗೆ ಕಾಳಿ ಅಂತ ಹೆಸರು. ಶಕ್ತಿ ಅಂತ ಹೆಸರು. ವಸ್ತುವೇನೋ ಒಂದೇ; ಹೆಸರು ರೂಪ ಮಾತ್ರ ಬೇರೆ ಬೇರೆ.

''ಈ ಜಗತ್ತು ನಾಶವಾದಾಗ, ಮಹಾಪ್ರಳಯವಾದಾಗ ಮುಂದಿನ ಸೃಷ್ಟಿಗಾಗಿ ಬೀಜಗಳನ್ನೆಲ್ಲಾ ಶೇಖರಿಸಿ ಇಟ್ಟುಕೊಂಡಿರುತ್ತಾಳೆ. ಇದು ಮನೆಯ ಯಜಮಾನಿ ತನಗೆ ಬೇಕಾಗುವ ಎಲ್ಲಾ ಬಗೆಯ ವಸ್ತುಗಳನ್ನು ಒಂದು ಗುಡಾಣದಲ್ಲಿ ಶೇಖರಿಸಿ ಇಟ್ಟುಕೊಳ್ಳುವುದಿಲ್ಲವೆ, ಹಾಗೆ. '' *(ವಚನವೇದ, ಭಾಗ ೧, ಪು. ೮೪-೮೫)*

''ಜೀವೋ ಬ್ರಹ್ಮೈವ ನಾಪರಃ'' –'ಜೀವವೇ ಬ್ರಹ್ಮವಲ್ಲದೆ ಬೇರಲ್ಲ' – ಎಂಬುದು ವೇದಾಂತದ ಒಂದು ಪ್ರಮುಖ ಮತವಾದ ಅದ್ವೈತ ದರ್ಶನದ ಅಭಿಪ್ರಾಯ. ಈ ವಿಚಾರವನ್ನು ಶ್ರೀರಾಮಕೃಷ್ಣರು ಹಲವೆಡೆ ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸುತ್ತಾರೆ. 'ಭಗವಂತನನ್ನು ಹುಡುಕುವುದಾದರೆ, ಅವನನ್ನು ಮಾನವನಲ್ಲಿ ಹುಡುಕು' ಎನ್ನುತ್ತಾರೆ. ಮಾನವನಲ್ಲಿ ಭಗವಂತನ ಆವಿರ್ಭಾವ ಅತ್ಯಧಿಕವಾಗಿದೆ ಎಂದು ಅವರು ಸ್ಪಷ್ಟವಾಗಿ ತಿಳಿಸುತ್ತಾರೆ. ಈ ಕಾರಣದಿಂದಲೇ ಅವರು ಒಂದು ಬಾರಿ ಸಮಾಧಿಯಿಂದ ಇಳಿದು ಬಂದಾಗ ಅರ್ಧಬಾಹ್ಯದೆಶೆಯಲ್ಲಿದ್ದುಕೊಂಡೇ 'ಶಿವಜ್ಞಾನೇ ಜೀವಸೇವಾ' ಎಂಬ ವಾಕ್ಯವನ್ನು ಉದ್ಗರಿಸಿದರು. ಈ ವಾಕ್ಯದ ಮಹತ್ವವನ್ನರಿತ ಸ್ವಾಮಿ ವಿವೇಕಾನಂದರು, ಇದರ ಹಿನ್ನೆಲೆಯಲ್ಲಿ ಸೇವಾತತ್ತ್ವ, ಕರ್ಮಯೋಗದ ಮಹತ್ವವನ್ನು ಜಗತ್ತಿಗೆ ಸಾರಿದರು.

### ಮತತ್ರಯ

ವೇದಾಂತದಲ್ಲಿ ಜೀವ-ಬ್ರಹ್ಮ ಇವುಗಳ ಸಂಬಂಧವೇನು ಎಂಬುದು ಒಂದು ಪ್ರಮುಖವಾದ ವಿಶ್ಲೇಷಣೆಯಾಗಿದೆ. ಉಪನಿಷತ್ತುಗಳ ನಾಲ್ಕು ಮಹಾವಾಕ್ಯಗಳು – 'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ', 'ಅಯಮಾತ್ಮಾ ಬ್ರಹ್ಮ', 'ಪ್ರಜ್ಞಾನಂ ಬ್ರಹ್ಮ' – ಇವು ಜೀವ, ಬ್ರಹ್ಮ ಇವೆರಡರ ನಡುವಿನ ಸಂಬಂಧವನ್ನು ತಿಳಿಸಿಕೊಡುತ್ತವೆ. ಇವುಗಳನ್ನು ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಮೊದಲಾದ ಮತಗಳು ತಮ್ಮದೇ ಆದ ಸಿದ್ಧಾಂತಗಳಿಗೆ ಅನುಗುಣವಾಗಿ ವಿವರಿಸುತ್ತವೆ. ಶ್ರೀರಾಮಕೃಷ್ಣರು ಈ ಮೂರೂ ದೃಷ್ಟಿಕೋನಗಳನ್ನು ಒಪ್ಪುತ್ತಾರೆ – ಅವುಗಳ ಸಮನ್ವಯವನ್ನು ಮಾಡುತ್ತಾರೆ. ಹನುಮಂತನ **'ದೇಹ ಬುದ್ಧ್ಯಾ ತು ದಾಸೋಽಸ್ಮಿ'** ಎಂಬ ಶ್ಲೋಕವನ್ನು ಶ್ರೀರಾಮಕೃಷ್ಣರು ಇಷ್ಟಪಡುತ್ತಿದ್ದರು.

ವೇದಾಂತದ ಈ ಪ್ರಮುಖ ವಿಚಾರಗಳನ್ನು ಶ್ರೀರಾಮಕೃಷ್ಣರ ಬೋಧನೆಗಳಲ್ಲಿ ನಾವು ಕಾಣುವ ಬಗೆ ಹೀಗೆ. ಆಧ್ಯಾತ್ಮಿಕ ಅನುಭವಗಳ ಸಾಗರವಾಗಿದ್ದ ಅವರಲ್ಲಿ ಇವು ಅತ್ಯಂತ ಸಹಜವಾಗಿ ವ್ಯಕ್ತಗೊಂಡಿದ್ದವು.

### ಆಗಸ್ಟ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೫ | ಮಂಗಳವಾರ | ಏಕಾದಶಿ |
| ೯ | ಶನಿವಾರ | ಸ್ವಾಮಿ ನಿರಂಜನಾನಂದ ಜಯಂತಿ |
| ೧೬ | ಶನಿವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| ೧೯ | ಮಂಗಳವಾರ | ಏಕಾದಶಿ |
| ೨೨ | ಶುಕ್ರವಾರ | ಸ್ವಾಮಿ ಅದ್ವೈತಾನಂದ ಜಯಂತಿ |
| ೨೭ | ಬುಧವಾರ | ಶ್ರೀಗಣೇಶ ಚತುರ್ಥಿ |